ಒಳಗೆ ನಿಲ್ಲಿಸಿದ ಕಾರು ಮತ್ತು ಬೈಕುಗಳು; ಕಳೆದ ಮೂವತ್ತು ವರ್ಷಗಳಲ್ಲಿ ಅವು ಇರುವಂತೆ ಇವೆ; ಆದರೆ ಈ ಮನೆಯ ಪರಿಸ್ಥಿತಿ ಹದಗೆಟ್ಟಿದೆ ಎಂದು ಅನಂತನಿಗೆ ಅನಿಸಿತು.

ಪಂಡಿತ ಮಾಸ್ತರ ಹಳೆಯ ಮಬ್ಬು ಗಾಜಿನ ಫೋಟೊವನ್ನು ಶೇಡಿ ಗೋಡೆಯ ಮೊಳೆ ಮೇಲೆ ನಿಲ್ಲಿಸಿದ್ದರು; ಫ್ರೇಮ್ ಪಟ್ಟಿ ಒರಲೆ ಕಚ್ಚಿ ತುಂಡಾಗುವ ಹಂತಕ್ಕೆ ಬಂದಿತ್ತು; ಮಾಸ್ತರಿಗೆ ತುಸು ತಿರುವಿದ ಮೀಸೆ ಇತ್ತು; ಎಡಗೈ ಮೇಲಿನ ಸುಟ್ಟ ಗಾಯದ ಕಲೆಯನ್ನು ಟರ್ಕಿ ಟವೆಲ್ಲಿಂದ ಮುಚ್ಚಿದ್ದರು; ಜೊತೆಯಲ್ಲಿ ಕೋಟುಧಾರಿ ಪಾಚಣ್ಣ ಬೆದರಿದ ಭಂಗಿಯಲ್ಲಿ ಕೂತಿದ್ದ; ಅಂಬಾಸಿಡರ್ ಕಾರಿನ ಪರದೆಯ ಹಿನ್ನಲೆಯ ಕಪ್ಪು–ಬಿಳುಪು ಫೋಟೊವನ್ನು ಹುಬ್ಬಳ್ಳಿಯ ಸ್ಟುಡಿಯೊದಲ್ಲಿ ತೆಗೆಸಿದ್ದರು; 'ಅಕ್ಕು ಮದುವೆಯ ವರ್ಷ ತೆಗೆದದ್ದು; ಲಾಟರಿ ಹುಚ್ಚು ಹಿಡಿದಿದ್ದ ಕಾಲ ಅದು' ಎಂದು ಸಲೀಲತ್ತೆ ಹೇಳಿದ ನೆನಪು. ಯಾವಾಗಲೂ ಮಾಸ್ತರ ಬಗಲ ಕಿಸೆಯಲ್ಲಿ ಬೇರೆ ಬೇರೆ ರಾಜ್ಯದ ಐದು, ಹತ್ತು, ಹದಿನೈದು ದಿನಗಳ ಡ್ರಾ ಇರುವ ಲಕ್ಷ, ಕೋಟಿ ಬಹುಮಾನದ ನಾನಾ ಬಣ್ಣದ ಲಾಟರಿ ಟಿಕೇಟುಗಳಿರುತ್ತಿದ್ದವು. ಮಾಸ್ತರು ಇಲ್ಲಿಗೆ ಬಂದಾಗ ಅನಂತನಿಂದ ಕೇರಿಯ ಮನೆಗಳಿಂದ ತರಿಸಿಕೊಳ್ಳುತ್ತಿದ್ದ ಎಲ್ಲ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಫಲಿತಾಂಶದಲ್ಲಿ ಅದೃಷ್ಟ ಲಕ್ಷ್ಮಿಯನ್ನು ಹುಡುಕುತ್ತ ಮಂಚದ ತುದಿಗೆ ಕೂತು ನಂಬರ್ ಟ್ಯಾಲಿ ಮಾಡುತ್ತಿದ್ದರು; ಅವರಿಗೆ ಒಲಿಯುತ್ತಿದ್ದದ್ದು ಕೊನೆಯ ನಂಬರಿನ ಹತ್ತೊ ಐವತ್ತೊ ರೂಪಾಯಿ ಅದೃಷ್ಟ ಮಾತ್ರ, ಕೋಟಿ ಗಿಟ್ಟಿದ ಅದೃಷ್ಟಶಾಲಿಯ ಫೋಟೊ ನೋಡಿ ಇತರರಿಗೂ ತೋರಿಸಿ ತಾನೂ ಒಂದಿನ ಲಕ್ಷಾಧಿಪತಿ ಆಗುತ್ತೇನೆಂದು ಕನಸು ಕಾಣುತ್ತಿದ್ದರು. ಒಲಿದ ಅತ್ಯಲ್ಪ ಅದೃಷ್ಟ ಹಣದಿಂದ ಪುಂಡಲೀಕನ ಅಂಗಡಿಯಿಂದ ಕಲ್ಲು ಸಕ್ಕರೆ ತರಿಸಿ ಮಕ್ಕಳಿಗೆ ಹಂಚುತ್ತಿದ್ದರು. ಬಂಗ್ಲೆಪ್ಪ ಮೊದಲು ಕಾಮತರ ಕಿರಾಣಿ ಅಂಗಡಿಯಲ್ಲಿ ಸಾಮಾನು ಕಟ್ಟುವ ಕೆಲಸದಲ್ಲಿದ್ದರೆಂದೂ ಬಂಪರ್ ಲಾಟರಿ ಹೊಡೆದ ನಂತರ ಅಕ್ಕಿ ಮಿಲ್ಲಿನ ದಂಧೆ ಆರಂಭಿಸಿ ನಾಲ್ಕು ಲಾರಿಗಳ, ತಾರಿಬಾಗಿಲ ಅರ್ಧಕರ್ಧ ಗದ್ದೆ ಬಯಲಿನ ಮಾಲೀಕರಾದರೆಂದೂ ಎಲ್ಲ ದೇವರ ಆಟ ನಾವು ನಿಮಿತ್ತ ಮಾತ್ರ ಎನ್ನುತ್ತ ತನ್ನ ಹಣೆಯನ್ನು ಮುಟ್ಟಿ ತೋರಿಸುತ್ತಿದ್ದರು.

ಮಾಸ್ತರ ಕಾಲದಾಚೆ ಮನೆ ಚಲಿಸಲೇ ಇಲ್ಲ; ಅದೇ ಗಿಲಾಯಿ ಮಾಡಿಸಿರದ ಚಿರೆಕಲ್ಲಿನ ಗೋಡೆ; ಸಿಮೆಂಟು, ಕಡಪಾ ಕಲ್ಲು ಹಾಸಿದ ಮಣ್ಣು ಒಳಗಳು; ಅಂಕಣ ಮುಚ್ಚಲಾಗದೆ, ಮಹಡಿ ಹಾಕಲಾರದೆ ಹಾಗೇ ಬರಿ ತೊಲೆಗಳಿರುವ ಖಾಲಿ ಛಾವಣಿ; ಒರಲೆ ಹಿಡಿದ ಕದಗಳು; ಯಾವಾಗಲೊ ನಿಂತು ಹೋದ ಗಡಿಯಾರ; ಸಾರಿಸಿ ನುಣ್ಣಗಾದ ಒಲೆಗಳು; ಲಡ್ಡಾದ ಜಾಡಿ ಕಂಬಳಿಗಳು; ಹರಿದ ಬೆತ್ತದ ದಂಡಿಗೆಯ ಕೊಡೆ; ಗೆರೆಸಿ; ಜಗಲಿಯಲ್ಲಿ ಗಿಡ್ಡ ಕಾಲುಗಳ ತಗ್ಗು ಮಂಚ; ಮಾಡಿನ ಕೆಳಗೆ ಜೋಲುವ ಬಿಂಜಲು ಮಾಲೆ. ಅನಂತನ ಕಾಲೇಜಿನ ದಿನಗಳಲ್ಲಿ ಇದೇ ಮನೆಯಲ್ಲಿ ವಿಚಿತ್ರ ಖುಷಿ ಮತ್ತು ಹೇವರಿಕೆಯಿತ್ತು. ಅಪ್ಪಿಯಕ್ಕ ಬೆಳಗ್ಗೆ ಎಂಟಕ್ಕೆ ಬಚ್ಚಲ ಒಲೆಯಿಂದ ಬೆರಳಿಗೆ ಹಂಡೆ ಬುಡದ ಮಶಿ ಹಚ್ಚಿಸಿಕೊಂಡು ಬೂದಿ ತೆಗೆದು ಕೊಡುತ್ತಿದ್ದಳು; ಮಂಡಿಯೂರಿ ಅವನು ಊದುತ್ತಿದ್ದಾಗ ಅವನ ಕುಂಡೆಗೆ ಪಟ್ ಎಂದು ಹೊಡೆದು ಅವಳೂ ಅಂಡೆ ಹಿಡಿದು ಊದುತ್ತ ಆ ಹೊಗೆಯಲ್ಲೆ ಅನಂತನ ಹಣೆಗೆ ತನ್ನ ತಲೆಯಿಂದ ಡಿಕ್ಕಿ ಹೊಡೆದು ನಗುತ್ತಿದ್ದಳು; ಬಾವಿಯಿಂದ ಇಬ್ಬರೂ ಜೊತೆಯಲ್ಲಿ ಹಗ್ಗಕ್ಕೆ ಕೈ ಹಚ್ಚಿ ಚಿಮ್ಮಿ, ಪುಟಿದು ನೀರು ಸೇದಿ ಹಂಡೆ ತುಂಬುತ್ತಿದ್ದರು; ಸಂಜೆ 'ಬಾಯಿ ಬೇಡಿ'ಗೆ ತೆಳು ಸಾಂಬಾರ ಅವಲಕ್ಕಿ ಕಲಸಿ ಕೊಡುತ್ತಿದ್ದಳು; "ಅಂತುಗೆ ಟೆಸ್ಟಿದ್ದು ನೀ ಒಬ್ನೆ ಹೋಗಿ ಬಾ, ಅಕಾ" ಎಂದು ದತ್ತುನ ಪುಸಲಾಯಿಸಿ ಗದ್ದೆ ಬಯಲಿಗೆ ಮೇಯಲು ಹೋಗುತ್ತಿದ್ದ ಆಕಳನ್ನು ಕರೆಯಲು ಕಳುಹಿಸುತ್ತಿದ್ದಳು. ಅಪರೂಪಕ್ಕೆ ಬಂಗ್ಲೆಪ್ಪನ ಮಿಲ್ಲಿಗೆ ಕುಚ್ಚಲಕ್ಕಿ ಮತ್ತು ಕುಟ್ಟವಲಕ್ಕಿ ತರಲು ಅನಂತನನ್ನು ಜೊತೆ ಮಾಡಿಕೊಳ್ಳುತ್ತಿದ್ದಳು; ಒಮ್ಮೊಮ್ಮೆ ಅವನ ತಲೆಗೂದಲನ್ನು ಮೂಸಿ, "ಯಾವ ಸೋಪದು?" ಎನ್ನುತ್ತಿದ್ದಳು. ಆಗಿನ್ನೂ ಮಾಸ್ತರ ಮನೆಗೆ ಕರೆಂಟು ಬಂದಿರಲಿಲ್ಲ; ರಾತ್ರಿ ಮಂಚದ